ಮಾಧ್ಯಮ ಮಾಹಿತಿ:

ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ರವರ ಹೆಸರು ನಾಮಕರಣ ಕಾರ್ಯಕ್ರಮ:



ನಗರದ ತುಮಕೂರು ರಸ್ತೆಯ ಗೊರಗುಂಟೆಪಾಳ್ಯದಿಂದ ಆರಂಭವಾಗಿ ಕೆನ್ನಮೆಟಲ್ ಕಾರ್ಖಾನೆಯವರೆಗೆ ಕೊನೆಗೊಳ್ಳುವ ಮೇಲುಸೇತುವೆ ಹಾಗೂ ಯಶವಂತಪುರ ವೃತ್ತದಿಂದ(ಸಂವಿಧಾನ ವೃತ್ತ) ಕೆನ್ನಮೆಟಲ್ ಕಾರ್ಖಾನೆವರೆಗಿನ ರಸ್ತೆಗೆ ಸಿದ್ಧಗಂಗಾ ಮಠದ ಪೀಠಾಧ್ಯಕ್ಷರು ಆದ ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿ ರವರು, ಪೂಜ್ಯ ಮಹಾಪೌರರು ರವರು, ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ರವರ ಹೆಸರನ್ನು ಗೊರಗುಂಟೆಪಾಳ್ಯ ಮೇಲುಸೇತುವೆ ಬಳಿ ನಾಮಕರಣ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಆಡಳಿತ ಪಕ್ಷದ ನಾಯಕರು ರವರು, ಶಾಸಕರುಗಳಾದ ಸನ್ಮಾನ್ಯ ಮಂಜುನಾಥ್ ರವರು, ಪಾಲಿಕೆ ಸದಸ್ಯರುಗಳಾದ ಮಾನ್ಯ ಉಮಾದೇವಿ ನಾಗರಾಜ್ ರವರು, ಮಾನ್ಯ ನಾಗರಾಜು ರವರು, ನರಸಿಂಹ ನಾಯಕ ರವರು, ಮಾನ್ಯ ಎಂ.ವೇಲುನಾಯಕರ್ ರವರು, ಮಾನ್ಯ ನಾಗಭೂಷನ್ ರವರು, ವಿಶೇಷ ಆಯುಕ್ತರು ಆದ ಲೋಕೇಶ್(ಹಣಕಾಸು) ರವರು, ಆರ್.ಆರ್.ನಗರ ಹಾಗೂ ದಾಸರಹಳ್ಳಿ ವಲಯದ ಜಂಟಿ ಆಯುಕ್ತರು, ಪಾಲಿಕೆ ಅಧಿಕಾರಿಗಳು ಹಾಗೂ ಇತರೆ ಗಣ್ಯರುಗಳು ಉಪಸ್ಥಿತರಿದ್ದರು.

ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಹೆಸರು ನಗರದಲ್ಲಿ ಅಜರಾಮರವಾಗಿರುವಂತೆ ಮಾಡಲು ಬಿಬಿಎಂಪಿ ತುಮಕೂರು ರಸ್ತೆ ಹಾಗೂ ಮೇಲು ಸೇತುವೆಗೆ  ನಾಮಕರಣ ಮಾಡುವ ಮೂಲಕ ಗೌರವ ಸೂಚಿಸಿರುವುದು ಶ್ಲಾಘನೀಯ ಸಂಗತಿ ಎಂದು  ಸಿದ್ಧಲಿಂಗ ಮಹಾಸ್ವಾಮಿ ರವರು ತಿಳಿಸಿದರು.

ಶ್ರೀ ಶಿವಕುಮಾರ ಸ್ವಾಮೀಜಿ ಅವರನ್ನು ಇಡೀ ದೇಶವೇ ಸ್ಮರಿಸುತ್ತಿದೆ. ಸೆಪ್ಟೆಂಬರ್ 21 ರಂದೇ ರಸ್ತೆಗೆ ನಾಮಕರಣ ಮಾಡಬೇಕಿತ್ತು. ಉಪಚುನಾವಣೆ ಹಿನ್ನೆಲೆ ನೀತಿ ಸಂಹಿತೆ ಜಾರಿಯಿದ್ದ ಪರಿಣಾಮ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ಇದೀಗ ಇಂದು ರಸ್ತೆ ನಾಮಕರಣ ಮಾಡುವ ಕಾಲಕೂಡಿಬಂದಿದೆ ಎಂದು ಹೇಳಿದರು.

ಮಹಾಪೌರರು ಮಾತನಾಡಿ, ಬೆಂಗಳೂರು ನಗರದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ರವರ ಹೆಸರು ಅಜರಾಮರವಾಗಿ ಉಳಿಸಬೇಕೆನ್ನುವ ಉದ್ದೇಶದಿಂದ ಗೊರಗುಂಟೆಪಾಳ್ಯದಿಂದ ಆರಂಭವಾಗಿ ಕೆನ್ನಮೆಟಲ್ ಕಾರ್ಖಾನೆಯವರೆಗೆ ಕೊನೆಗೊಳ್ಳುವ ಮೇಲುಸೇತುವೆ ಹಾಗೂ ಯಶವಂತಪುರ ವೃತ್ತದಿಂದ (ಸಂವಿಧಾನ ವೃತ್ತ) ಕೆನ್ನಮೆಟಲ್ ಕಾರ್ಖಾನೆ ರಸ್ತೆಗೆ ನಾಮಕರಣ ಮಾಡಲಾಯಿತು ಎಂದರು.

ಸಮಾಜದ ಕಟ್ಟಕಡೆಯ ಮಗುವಿಗೂ ವಿಧ್ಯಾಭ್ಯಾಸ ದೊರಬೇಕೆನ್ನುವ ನಿಟ್ಟಿನಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಂತಹ ಸ್ವಾಮಿಗಳು, ಸುಮಾರು  8 ದಶಕಗಳಿಂದ ಅನ್ನ, ಅಕ್ಷರ, ಜ್ಞಾನ ನೀಡಿದ ತ್ರಿವಿದ ದಾಸೋಹಿಗಳು, ಮಠದ ಪರಂಪರೆಯನ್ನು ವಿಶ್ವವಿಖ್ಯಾತಿಗೊಳಿಸಿದರು. ಅಂತಹ ಪೂಜ್ಯ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿಗಳ ಹೆಸರು ಅಜರಾಮರವಾಗಿಲು ಈ ರಸ್ತೆಗೆ ನಾಮಕರಣ ಮಾಡಿರುವುದು ನನ್ನ ಪುಣ್ಯ ಎಂದು ಹೇಳಿದರು.

